ಕೊಡಗು ಫಾರೆಸ್ಟ್ಸ್ ಇಲಾಖಾ.

ನೋ ಟಿ ಸ್.

ಕರೀಮರದ ಮಾರಾಟ.

ಮಲಬಾರು ಜಿಲ್ಲಾ ಬೈವಿಯಾಪಟ್ಣದಲ್ಲಿ ಈಗ ಜವಾಯಿಸಿ ನಿಟ್ಟಿರುವ ಹೆಚ್ಚು ಕಡಿಮೆ 1100 ಕ್ಯೂಬಿಕ್ ಫೂಟು ಉಳ್ಳ 5 ಲಾಟು ಸಾಧಾರಣ ಕೆತ್ತಿರುವ ಕರೀ ಮರವನ್ನು ಕೊಂಡುಕೊಳ್ಳುವ ಬಗ್ಗೆ 1903ನೇ ಇಸವಿ ಆಗಸ್ಟ್ ತಾರೀಖು 1ನೇ ವರೆಗೆ ದರಖಾಸ್ತುಗಳು ತೆಗದುಕೊಳ್ಳಲ್ಪಡುವವು. ತೊಲೆಗಳ ಪಟ್ಟಿಯನ್ನು ಕೊಡಗುಜಿಲ್ಲಾ ಡೆಪ್ಯುಟಿ ಕನ್ಸರ್‌ವೇಟರ್, ಮಡಿಕೇರಿ, ಇವರುಗಳಿಗೆ ಬರೆದು ತರಿಸಿಕೊಳ್ಳಬಹುದು.

2. ಪ್ರತಿ ಒಂದು ದರಖಾಸ್ತಿನೊಡನೆ ಒಂದುನೂರು ರೂಪಾಯಿನ ಕರೆನ್ಸಿ ನೋಟನ್ನು ಅಡ್ವಾನ್ಸಾಗಿ ಕಳುಹಿಸತಕ್ಕದ್ದು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತು ಇರುವ ಲಿಫಾಫೆಗಳನ್ನು "ಕೊಡಗು ಫಾರೆಸ್ಟ್ಸ್ ಡೆಪ್ಯುಟಿ ಕನ್ಸರ್‌ವೇಟರ್ ಸಾಹೇಬರವರಿಗೆ–ಮಡಿಕೇರಿ" ಎಂದು ವಿಳಾಸ ಬರೆದು ಇನ್‌ಷೂರ್ ರಿಜಿಸ್ಟರ್ ಮಾಡಿದ್ದಲ್ಲಿ "ಕರೀಮರ ಕೊಂಡುಕೊಳ್ಳುವ ಬಗ್ಗೆ ದರಖಾಸ್ತು" ಎಂದು ಲಿಫಾಫೆಯ ಮೇಲೆ ಬರೆದಿರಬೇಕು.

3. ತಲಪಿರುವ ದರಖಾಸ್ತುಗಳನ್ನೆಲ್ಲಾ 1903ನೇ ಇಸವಿ ಆಗಸ್ಟ್ 1ನೇ ತಾರೀಖಿನಲ್ಲಿ ವಡಿಯಲ್ಪಡುವವು. ಈ ತಾರೀಖು ನಂತರ ತಲಪುವ ದರಖಾಸ್ತುಗಳನ್ನು ವಡಿಯದೇನೇ ಟಪ್ಪಾಲು ಆಫೀಸಿಗೆ ವಾಪಸು ಕಳುಹಿಸಲ್ಪಡುವವು.

4. ದರಖಾಸ್ತುದಾರನು ಮೇಲ್ಕಂಡ ತೊಲೆಗಳ ಪಟ್ಟಿಯಲ್ಲಿ ಕಾಣುವ ಪ್ರತಿ ಒಂದು ಲಾಟಿಗೆ ಪ್ರತ್ಯೇಕವಾಗಿ ತನ್ನ ದರವನ್ನು ನಮೂದಿಸತಕ್ಕದ್ದು. ದರಖಾಸ್ತುಗಳನ್ನು ಒಂದೊಂದು ಕ್ಯೂಬಿಕ್ ಫೂಟುಗಾಗಲಿ ಯಾ ಇಂತಿಂಥಾ ತೊಲೆಗಳಿಗೆಂತಾಗಲಿ ಯಾ ಎರಡು ಯಾ ಹೆಚ್ಚು ಲಾಟುಗಳಿಗೆ ಇಷ್ಟು ಒಟ್ಟು ಹಣ ಯೆಂತಾಗಲಿ ಯಾ ಎಲ್ಲಾ ಮರಕ್ಕೆ ಇಷ್ಟೇ ಹಣ ಯೆಂತಾಗಲಿ ಕೇಳಕೂಡದು.

5. ಜಾಸ್ತಿ ದರದ ಯಾವ ದರಖಾಸ್ತನ್ನಾಗಲಿ ಆಂಗೀಕರಿಸಲೇಬೇಕೆಂಬುವದಕ್ಕೆ ಡೆಪ್ಯುಟಿ ಕನ್ಸರ್‌ವೇಟರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ದರಖಾಸ್ತು ಮಂಜೂರಾತಿಯನ್ನು ಸದರಿ ದರಖಾಸ್ತುದಾರನಿಗೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಅಡ್ವಾನ್ಸು ಮೊಬಲಗು ಸ್ಟ್ಯಾಂಪು ಹಚ್ಚಿಸಿರುವ ರಸೀತಿಗಳನ್ನು ಹಾಜರು ಮಾಡಿದ ವಡನೆ ಅವರಿಗೆ ವಾಪಾಸು ಮಾಡಲ್ಪಡುವದು.

6. ಖರೀದಿದಾರನು ದರಖಾಸ್ತು ಮಂಜೂರಾದ ಏಳುದಿವಸಗಳೊಳಗೆ ಅವನಿಗೆ ಕೊಡಲ್ಪಡುವ ಅಡ್ವಾಯಿಸು ಮೇರೆ ಖರೀದಿ ಮೊಬಲಗಿನ ದಶಾಂಶವನ್ನು ಠೇವಣಿ ಬಗ್ಗ್ಯೂ ಬಾಕಿ ಹಣವನ್ನು (ಮೊದಲು ಇತ್ತ ಅಡ್ವಾನ್ಸು ಹಣ ವಜಾನಾಡಿ) ಮಂಜೂರಾದ 30 ದಿವಸಗಳೊಳಗೂ ಖಜಾನೆಗೆ ಪಾವತಿ ಮಾಡತಕ್ಕದ್ದು. ಸದರಿ ಎರಡು ಮೊಬಲಗುಗಳಲ್ಲಿ ಯಾವುದಾದರೂ ಬಂದನ್ನೇ ಆಗಲಿ ಪಾವತಿ ಮಾಡಲು ತಪ್ಪಿದ್ದಲ್ಲಿ ದರಖಾಸ್ತು ರದ್ದುಮಾಡಿ ಅಡ್ವಾನ್ಸು ಹಣ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಮಾರಾಟ ಪುನಃ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲನೇ ದರಖಾಸ್ತುದಾರನನ್ನು ಬದ್ಧನನ್ನಾಗಿ ಮಾಡಲ್ಪಡುವದು.

7. ಮೂರಲ್ಪಟ್ಟು ಮರವು ಮಂಜೂರಾದ ತಾರೀಖು ಲಾಗಾಯಿತು ದರಖಾಸ್ತುದಾರನ ಜವಾಬ್ದಾರಿಯಲ್ಲೇ ಇರುವದು. ಆದರೆ ಮರ ಸಾಗಿಸಲು ಪೂರಾ ಮೊಬಲಗು ಪಾವತಿ ಮಾಡಿದ್ದಲ್ಲದೆ ಬಿಡಲ್ಪಡುವದಿಲ್ಲಾ.

8. ಖರೀದಿದಾರರು ಅವಶ್ಯವಿದ್ದರೆ ತೊಲೆಗಳನ್ನು ಪುನಃ ಅಳತೆ ಮಾಡಬಹುದು. ಆದರೆ ಮರ ಸಾಗಿಸಿದನಂತರ ಕಂಡುಬರುವ ವ್ಯತ್ಯಾಸಗಳನ್ನಾಗಲಿ ಅಥವಾ ಯಾವ ಸಂಗತಿಯಲ್ಲಾದರೂ ಅಂಥಾ ವ್ಯತ್ಯಾಸಗಳನ್ನ ಕುರಿತು ಸಮಾಧಾನ ಪಡಿಸಿದ್ದಲ್ಲದೆ ಡೆಪ್ಯುಟಿ ಕನ್ಸರ್‌ವೇಟರ್ ಸಾಹೆಬರವರು ಒಪ್ಪಿಕೊಳ್ಳಲಿಕ್ಕಿಲ್ಲಾ. ಒಪ್ಪಿಕೊಂಡ ವ್ಯತ್ಯಾಸಗಳಲ್ಲಿ ಹೆಚ್ಚು ಬಂದರೆ ಅದಕ್ಕೆ ಸರಿಯಾಗುವ ಮೊಬಲಗು ಕೊಡಲೂ ಯಾ ಕಡಿಮೆ ಬಂದಲ್ಲಿ ವಜಾ ಪಡಿಯಲೂ ದರಖಾಸ್ತುದಾರರು ಅರ್ಹರಾಗುತ್ತಾರೆ.

9. ತಪ್ಸೀಲು ಪಟ್ಟಿಗಳ ಮತ್ತು ಕಡಿಮೆ ವಿಷಯಗಳನ್ನು ಈ ಕೆಳಿಗೆ ಸೈ ಮಾಡಿರುವವರಿಗೆ ಬರೆದು ತರಿಸಿಕೊಳ್ಳಬಹುದು.

ಸಿ. ಮೆಕ್ಕಾರ್ತಿ,
ಕೊಡಗು ಡೆಪ್ಯುಟಿ ಕರ್ಸರ್ವೇಟರ್, ಮಡಿಕೇರಿ.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಾರ್ಕಾರಹಳ್ಳಿ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ ಮರಳೆ ಜೇಕುಪ್ಪೆ ಎಂಬ ಗ್ರಾಮವು ಕಂದಾಯದ ಬಾಕಿಗೋಸ್ಕರ ಕಾರ್ಕಾರಹಳ್ಳಿ ತಾಲ್ಲೂಕು ಕಳ್ಳೇರಿ ಕಟ್ಟೆಪದಲ್ಲಿ 3—8—03ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜುಲೈ 2ನೇ ತಾರೀಖಿನ ಮೈಸೂರು ಗೆಜೆಟ್ II‌ನೇ ಭಾಗದಲ್ಲಿ ಘಾಯಿಷಾಗಿರುತ್ತೆ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಮಲ್ಲಸಂದ್ರ ಗ್ರಾಮದ ಜೋಡಿದಾರ್ ಗಿರಿಯಮ್ಮನಿಂದ ಬರಬೇಕಾದ ಜಮಿರ್ಣ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಸ್ರ 1903ನೇ ಆಗಸ್ಟ್ 20ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ವೇರಿಗೆ 413—1—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಹೊಡ್ಡೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈಕ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಿಸಿದವರ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಮಿಷ್ಕಿಲ್ ಅಥವಾ ಅಂದಾಜಾ ಬಾಗಾಯತು.	ನಿರ್ಣ.	ವಿಸ್ತೀರ್ಣ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಬೆಂಗಳೂರು	ಯಲಹಂಕ	ಜೋಡಿ ಮಲ್ಲಸಂದ್ರ	ಗಿರಿಯಮ್ಮ	..		ಪೂರಾ ಗ್ರಾಮ ಪೂರ್ವಕ್ಕೆ—ಕೆಟ್ಟಹಳ್ಳಿ ಪಶ್ಚಿಮಕ್ಕೆ—ಬಾಗಲಕುಂಟೆ ದಕ್ಷಿಣಕ್ಕೆ—ದಾನರಹಳ್ಳಿ ಉತ್ತರಕ್ಕೆ—ಚಿಕ್ಕಸಂದ್ರ ವಿಸ್ತೀರ್ಣ 657 ಎ. 3 ಗ.	ರೂ. ಆ. ಪೈ. ಜೋಡಿ 268 6 2		ರೂ. ಆ. ಪೈ. 411— 9—2 ಜೋಡಿ 1— 8—0 ಪ್ರೊಸೆಸ್ಸು 413— 1—2 ಜುಮ್ಲಾ

* ಯಾ ಬಾಕೀ ಇರುವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 30ನೇ ಜೂ|| 1903.

1. ಕಂದಾಯದ ಬಾಕೀದಾರರಾದ ಶ್ರೀಯುತ ಹಕ್ಕ್ದಾರರಾದ Mrs. Blake ಯವರಿಂದ ಬರಬೇಕಾದ ಜಮೀರ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ದೇವಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1903ನೇ ಇಸವಿ ಆಗಸ್ಟು 20ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆದಿವಸ ದಿನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1900—01, 01—02 & 02—03ನೇ ಮತ್ತು ಚಾಲ್ತಿವರಿಗಿನ ಬಡ್ಡಿ ವಗೈರೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 2,000—9—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರ್ರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರ್ರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟನ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಖಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡಿಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡಿಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡಿಪ್ಯೂಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಖಂಡಿತ ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡಿಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ಯಾನಿಂದ ವಿಧಿಸಲ್ಪಟ್ಟ ರಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆಂಥಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಖಿಷ್ಕಿ ತರೀ ಬಾಗಾಯ್ತು ಪರಂಪೋಕು ಜಮೀನಿನ ಹೆಸರು.	ಖಿಷ್ಕಿ, ತರೀ ಬಾಗಾಯ್ತು ಪರಂಪೋಕು ಜಮೀನಿನ ಹದ್ದು.	ವಿಸ್ತೀರ್ಣ.			ಆಕಾರ.			ಇವಗಂಗಾ ಮಠಕ್ಕೂ ಬರಬೇಕಾದ ಸಹಿತನಾದ ನಜ್ಜೋಟಿನ ಷಿ ನಜ್ಜೋಟಿನ ಬಾಕೀ ಮೊಬಲಗು.		
								ಎ.	ಗು.		ರೂ.	ಆ.	ಪೈ.	ರೂ.	ಆ.	ಪೈ.
ದೇವನಹಳ್ಳಿ	ದೇವನಹಳ್ಳಿ ಕಸಬು	ಜೋಡಿ ಸನ್ಯಾಡಹಳ್ಳಿ	Mrs. Blake	...	...	ಪೂರಾ ಗ್ರಾಮ	ಖುಷ್ಕಿ	362	1		592	8	0	2,000	9	2
							ತರಿ	....	....		..	..				
							ಬಾಗಾಯಿತು	....	26		2	0	0			
							ಪರಂಪೋಕು	15	33		..	...	..			
							ಜುಮ್ಲಾ	378	20		594	8	0			

ಈ ಗ್ರಾಮದಲ್ಲಿ ಬಾಕೀದಾರರು ಶ್ರೀ ಶಿವಗಂಗಾ ಮಠದ ತರಫು ಸರಕಾರದಿಂದ ಶ್ರೋತ್ರಿಯಕ್ಕೋಸ್ಕರ ಪಡದುಕ್ಕೊಂಡು ಅನುಭವಿಸುತ್ತಿದ್ದ ದರೋಬಸ್ತು ಹಕ್ಕು ಬಾಧ್ಯತೆಗಳನ್ನು ಹರಾಜು ಮಾಡಿಸಲ್ಪಡುತ್ತೆ.

* ಯಾ ಬಾಕಿ ಇರುವವುಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಹೆಚ್. ಹೆಚ್. ಸ್ಪ್ವರ್ಟ್ಸ್, ಡಿಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 18—20ನೇ ಜೂ ಸ್ರ 1903.

1. ಕಂದಾಯದ ಬಾಕೀದಾರರಾದ ಜಂಗಂಕೋಟೆ ಗ್ರಾಮದ ರಂಗರಾವ್ ಮತ್ತು ಪುಲಮತಿ ಸುಬ್ಬರಾಯರ ಕಡೆ ಕೃಷ್ಣಪ್ಪನಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟ ತಾಲ್ಲೂಕು ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕ್ರಯಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ 106—15—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳಿ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಹೊಡ್ಡೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರಿ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ಸ್ಕಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಕಟ್ಟಡಗಳು.		ಜಮೀನು.				ಸ್ವತ್ತಿನ ತಫ್ಸೀಲ್.	ಸರ್ಕಾರಕ್ಕೆ ಬರಬೇಕಾದ ನೋ ಟಿನ್ಸೀಸ್ಸರ ಸಹಿತವಾದ ಮೊಬಲಗು.
				ಕಟ್ಟಿಸಿದ ಹೆಸರು.	ಅಂದಾಜು ಕಿಮ್ಮತ್ತು.	ಸರ್ವೆ ನಂಬರ್ ಅಥವಾ ಹಿಸ್ಸಾನಂಬರ್ ಹೆಸರು.	ಮುಸ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಕಾರ.		
ಶಿಡ್ಲಘಟ್ಟ	ಜಂಗಂಕೋಟೆ	ಕಾಯಂಗುತ್ತಾ ಪುರ	ರಂಗರಾವ್, ಪುಲಮತಿ ಸುಬ್ಬರಾಯರ ಕಡೆ ಕೃಷ್ಣಪ್ಪ	...	ರೂ. ಆ. ಪೈ. ..	ಕಾಯಂಗುತ್ತಾ ಪುರ ಗ್ರಾಮಕ್ಕೆ ಚಕ್ಕುಬಂದಿ.— ಪೂರ್ವಕ್ಕೆ —ಕದಿರಾಪುರದ ಎಲ್ಲೆ. ಪಶ್ಚಿಮಕ್ಕೆ —ಅತ್ತಿಗಾನಹಳ್ಳಿ ಎಲ್ಲೆ. ಉತ್ತರಕ್ಕೆ —ಯಂಗೂರು ಎಲ್ಲೆ. ದಕ್ಷಿಣಕ್ಕೆ —ಹೆಮ್ಮಾರ್ನಹಳ್ಳಿ ಎಲ್ಲೆ. ಈ ಮಧ್ಯೆ ಇರತಕ್ಕ ಪೂರಾ ಗ್ರಾಮ ಜಾರಿ ಟಿಲ್ಲರೆ ಇನಾಂತಿ ಶಿವಾಯಿ.			ಎ. ಗು. ರೂ. ಆ. ಪೈ.		ಜಂಗಂಕೋಟೆ ಹೋಬಳಿ ಕಾಯಂಗುತ್ತಾ ಪುರ ಗ್ರಾಮಕ್ಕೆ— ಶುಷ್ಕಜಮು ಸಾಲ್ ಬಾಕಿ ... 105— 7—8 ನೋಟಿಸ್ ಫೀ ದ್ಯೋರ ... 1— 8— 106—
						ಪರಂಪೋಕು ... 150—30		2— 4— 0			
						ಖುಷ್ಕಿ ... 84— 2		116— 4— 0			
						ಬಾಗಾಯತು ... 15—36		87— 0— 0			
								250—28	205— 8— 0		

* ಯಾ ಬಾಕೀ ಇರುವ ಮೊಬ್ಬಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೇ ಜುಲೈ 1903.

1. ಕಂದಾಯದ ಬಾಕೀದಾರರಾದ ಪಾರಸಿಗ್ಯಾನಹಳ್ಳಿ ಗ್ರಾಮದ ರಾಮಸುಬ್ಬಾಭಟ್ಟ ವಗೈರೇರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಳ್ಳೇರಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು ಅಮಲ್ದಾರ್‌ವರ ರೂಬರೂಬ್ 1903ನೇ ಇಸವಿ ಸೆಪ್ಟೆಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜೆಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ತಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 447—13—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳೊಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಆವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫು ನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಪಷ್ಟಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳೊಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಮಿಷನರಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು	ಜಮೀನು. ನಂಬರ್ ಅಥವಾ ಹಿಸ್ಸಾನ ಹೆಸರು.	ಜಮೀನು. ಮುಸ್ಕಿಲ್ ತರೀಜಿನ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಕಿಸ್ತಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.			
				ರೂ. ಆ. ಪೈ.				ಎ. ಗು.	ರೂ. ಆ. ಪೈ.		ರೂ.	ಆ.	ಪೈ.	
ಕೋಲಾರ	ನಾಗಲೇರಿ	ಜೋಡಿ ಪಾರಸಿಗ್ಯಾನಹಳ್ಳಿ	ರಾಮಸುಬ್ಬಾಭಟ್ಟ ವಗೈರೆ	...	...	..	ಪರಂಪೋಕು	462 30	.. ..		0	0	9	ವಿಳಂಬಿ
							ಖುಷ್ಕಿ	182 30	263 0	0	131	8	1	ವಿಕಾರಿ
							ತರಿ	20 8	91 8	0	75	5	9	ಶಾರ್ವರಿ
							ಬಾಗಾಯತು	19 37	114 0	0	122	5	5	ಪ್ಲವ
											117	9	2	ಶುಭಕೃತು
								685 25	468 8	0				
											446	13	2	
											0	8	0	ನೋಟಿಸ್ ಫೀ
											0	8	0	ಇಸ್ತಿಹಾರ್ ಫೀ
											447	13	2	

ಚಕ್ಕುಬಂದಿ.

ಪೂರ್ವಕ್ಕೆ—ಮುದವತಿ ಸರಹದ್ದು

ಪಶ್ಚಿಮಕ್ಕೆ—ಜೋಡಿ ದಂಡಿಗ್ಯಾನಹಳ್ಳಿ, ಲಿಂಗಧೀರ್ನಹಳ್ಳಿ ಸರಹದ್ದು

ಉತ್ತರಕ್ಕೆ—ನೆರ್ನಹಳ್ಳಿ, ಮುದವತಿ ಗ್ರಾಮದ ಸರಹದ್ದು

ದಕ್ಷಿಣಕ್ಕೆ—ನಾಡಾಪುರ ಕುಂಟನಹಳ್ಳಿ ಸರಹದ್ದು

ಇದಕ್ಕೆ ಆಗುವ ಬಡ್ಡಿ ಸಹ

* ಯಾ ಬಾಕಿ ಇರುವನ್ನುಳಿದು ಅರ್ಜಿಯಾನುಸಾರ ನಮೂದಿಸತಕ್ಕದ್ದು.

ತಾರೀಖು 2ನೇ ಜುಲೈ 1903ನೇ ಇಸವಿ.

ಶಿಡ್ಲಗಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಕಾಯಂಗುತ್ತಾ ಕರಿಯನಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 372-373ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತಾರೀಖು 2ನೇ ಜುಲೈ 1903ನೇ ಇಸವಿ.

ಶಿಡ್ಲಗಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಕಾಯಂಗುತ್ತಾ ಚಿಕ್ಕಬಲ್ಲ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲು ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 374ನೇ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 24ನೇ ಜೂನ್ 1903.

ಕೋಲಾರ ತಾಲ್ಲೂಕಿಗೆ ಸೇರಿದ ಕಾಯಂಗುತ್ತಾ ರಾಮಾಪುರದ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಆಗಸ್ಟ್ 11ನೇ ತಾರೀಖಿನಲ್ಲು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲು ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಗೆಜೆಟ್ಟಿನ IIನೇ ಭಾಗದ 371-372ನೇ ನಂಬರ್ ಪೇಜು ನೋಡತಕ್ಕದ್ದು.

ಎಚ್. ದಾಸಪ್ಪ,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 9ನೇ ಜುಲೈ 1903.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ—ಹೊಳೆ ನರಸೀಪುರದಲ್ಲಿ ಹೇಮಾವತಿ ನದಿಗೆ ಸೇತುವೆ ಕಟ್ಟಿಸಿ ಹೊಸ ರಸ್ತೆ ಹಾಕಿದ ಸಂದರ್ಭದಲ್ಲಿ ಸರಕಾರಿ ರಸ್ತೆಗೋಸ್ಕರ ಇದೆ ವರ್ಷನಲ್ಲಿ ದೊಣ್ಣೆಯ್ಯನ ಜಂಗವು ಮಠವೆಂಬ—ಪೂರ್ವಕ್ಕೆ—ನಂಜಪ್ಪನ ಸರ್ವೆ 94ನೇ ಪೈಕಿ ಹೊಲ, ಪಶ್ಚಿಮಕ್ಕೆ—ಸರ್ವೆ 95ನೇ ಹೊಲ, ದಕ್ಷಿಣಕ್ಕೆ—ಹಾಸನದ ರಸ್ತೆ, ಉತ್ತರಕ್ಕೆ—ಕೆಳು ನಾಲೆ—ಈ ಮಧ್ಯೆ ಪೂರ್ವ ಪಶ್ಚಿಮ ಗಜ 40, ದಕ್ಷಿಣೋತ್ತರ ಗಜ 60, ಸಲೆ ಗಜ 2400 ವುಳ್ಳ ಪಾಳು ಜಾಗಾ ಪೈಕಿ ಸರಕಾರಕ್ಕೆ ತೆಗದುಕೊಂಡ 1815 ಗಜ ವುಳ್ಳ ಜಾಗಾಕ್ಕೆ ಮಾಲೀಕರಿಗೆ ಪಾವತಿಯಾಗಲು 12 ಹನ್ನೆರಡು ರೂಪಾಯಿ ಕ್ಯಾಂಪ್ ಸೇರ್ಷ ಗೊತ್ತಾಗಿ ಸದರೀ ಮಠದ ಜಾಗಾಕ್ಕೆ ವಾರಸುದಾರು ನಿರ್ಧರ ಪಡದೆ ಬಾಕಿಯಲ್ಲಿರುತ್ತೆ. ಮೇಲ್ಕಂಡ ಪಾಳು ಜಾಗಾವು ಯಾರ ಸ್ವಾಧೀನದಲ್ಲಿದ್ದು ಸದರೀ ಕ್ಯಾಂಪ್ ಸೇರ್ಷ ಮೊಬಲಗ್ಗೆ ಹಕ್ಕುದಾರು ಯಾರೋ ಅವರು ತಮ್ಮ ಹಕ್ಕನ್ನು ತಕ್ಕ ಕೋರ್ಟಿನಲ್ಲಿ ಸ್ಥಿರಪಡಿಸಿಕೊಂಡು ಆ ಕೋರ್ಟು ಸರ್ಟಿಫಿಕೇಟನ್ನು ಈ ನೋಟೀಸು ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು 6 ಆರು ತಿಂಗಳ ವಳಗಾಗಿ ನಮ್ಮಲ್ಲಿ ಹಾಜರ್ಪಡಿಸಿದಲ್ಲಿ ಅಂಥಾವರಿಗೆ ಕ್ಯಾಂಪ್ ಸೇರ್ಷ ಮೊಬಲಗು ಪಾವತಿ ಮಾಡಿಸುತ್ತೆ. ಇದಕ್ಕೆ ತಪ್ಪಿದಲ್ಲಿ ಮೇಲ್ಕಂಡ ಮೊಬಲಗು ಯಾರಿಗೂ ಸಿಕ್ಕಲಾರದು.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

1903ನೇ ಇಸವಿ ಜೂನ್ ಮಾಹೆ ತಾರೀಖು 27ನೇ ಶನಿವಾರ ಶಿವಮೊಗ್ಗದಲ್ಲಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಫಂಡು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗತಃ ಮೆಂಬರುಗಳು.

ಮೆ|| ಕೆ. ಪಿ. ಪುಟ್ಟಣ್ಣ ಶೆಟ್ಟರವರು, ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರೆಸಿಡೆಂಟರವರು, (ಸಭಾಧ್ಯಕ್ಷರು).
1. ,, ಕೆ. ಪ್ರಹ್ಲಾದರಾಯರವರು, ಎಗ್ಸಿಕ್ಯೂಟಿವ್ ಇಂಜಿನಿಯರವರು.
2. ,, ಸಿ. ಎಸ್. ಬಾಲಸುಂದರಮ್ಮಯ್ಯರವರು, ಸಾಗರ ಸಬ್ ಡಿವೀಜನ್ ನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರು.